ದೂರವಾಣಿ: 2419677/2419361
ಫ್ಯಾಕ್ಸ್: 0821-2419363/2419301

ಇ-ಮೇಲ್: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

**ಸ್ಥಾಪನೆ : 1916**

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005

---

ವಿಷಯ: 2024-25ನೇ ಶೈಕ್ಷಣಿಕ ಸಾಲಿನಿಂದ ಮೈಸೂರಿನ **ಎಂ.ಐ.ಟಿ ಪದವಿ ಕಾಲೇಜಿನಲ್ಲಿ** ಬಿ.ಸಿ.ಎ ಕೋರ್ಸಿಗೆ 120 ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ ಮಂಜೂರಾತಿ ನೀಡುವ ಬಗೆಗೆ .

ಉಲ್ಲೇಖ: 1) AICTE ಆದೇಶ ಸಂಖ್ಯೆ South-west/2024-25/1-43893297193 ದಿನಾಂಕ: 09.05.2024
2) ಸ್ಥಳೀಯ ವಿಚಾರಣಾ ಸಮಿತಿ ಭೇಟಿ ನೀಡಿದ ದಿನಾಂಕ 05.06.2024
3) ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ದಿನಾಂಕ 11.06.2024
4) ಸಿಂಡಿಕೇಟ್ ಸಭೆಯ ನಿರ್ಣಯದ ದಿನಾಂಕ 12.06.2024
5) ಸರ್ಕಾರಕ್ಕೆ ಕಳುಹಿಸಿರುವ ಯು.ಯು.ಸಿ.ಎಂ.ಎಸ್ ಪ್ರಸ್ತಾವನೆಯ ದಿನಾಂಕ 15.06.2024
6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ ಇಡಿ 85 ಯುಎಂವಿ 2024 ದಿನಾಂಕ 16.11.2024
7) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 26.11.2024.

* * * * *

**ಪ್ರಸ್ತಾವನೆ:**

**ಎಂ.ಐ.ಟಿ ಪದವಿ ಕಾಲೇಜು, ಕೆಸರೆ** ಮೈಸೂರು ರವರಿಗೆ2024-25ನೇ ಶೈಕ್ಷಣಿಕ ಸಾಲಿನಿಂದ ದಿನಾಂಕ 10.07.2024ರಂದು ಬಿ.ಸಿ.ಎಕೋರ್ಸ್‌ಗೆ60 ವಿದ್ಯಾರ್ಥಿಗಳ ಪ್ರವೇಶಾತಿಗೆ ತಾತ್ಕಾಲಿಕ ಸಂಯೋಜನೆಯನ್ನು ಈಗಾಗಲೇ ನೀಡಲಾಗಿದೆ.ಆದರೆ ಕಾಲೇಜಿನವರು ಬಿ.ಸಿ.ಎಕೋರ್ಸ್‌ಗೆಹೆಚ್ಚುವರಿ 120 ಪ್ರವೇಶಾತಿ ಪ್ರಮಾಣ ಕೋರಿ ಅರ್ಜಿ ಸಲ್ಲಿಸಿದ್ದು, ಸ್ಥಳೀಯ ತನಿಖಾ ಸಮಿತಿಯು ದಿನಾಂಕ 05.06.2024 ರಂದು ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿ ಮೇಲ್ಕಂಡ ಕೋರ್ಸುಗಳಿಗೆಹೆಚ್ಚುವರಿ 120 ಪ್ರವೇಶಾತಿ ಪ್ರಮಾಣ ನೀಡಲು ಶಿಫಾರಸ್ಸು ಮಾಡಿರುತ್ತದೆ.ಸದರಿ ಕಾಲೇಜಿನವರು AICTEಯಿಂದ 180 ವಿದ್ಯಾರ್ಥಿ ಪ್ರಮಾಣದ ಪ್ರವೇಶಾತಿಗೆ ಆದೇಶವನ್ನು ಪಡೆದಿರುತ್ತಾರೆ. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆಯೊಡನೆ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿಸರ್ಕಾರದಿಂದ ಈ ಪ್ರಸ್ತಾವನೆಗೆ ಅನುಮೋದನೆ ದೊರೆತಿರುತ್ತದೆ.ಅದರಂತೆ ಈ ಕೆಳಕಂಡ ಆದೇಶ. .

## ಸಂಯೋಜನಾ ವಿಸ್ತರಣಾ ಮಂಜೂರಾತಿ ಆದೇಶ ಸಂಖ್ಯೆ ಸಿಡಿಸಿ-1/59/2024-25

## ದಿನಾಂಕ 26.11.2024

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಗಳ ಅಧಿನಿಯಮ 2000, ಪ್ರಕರಣ 59 (18)ರ ಮೇರೆಗೆ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಇವರ ಉಲ್ಲೇಖ 05 ರನ್ವಯ 2024-25ನೇ ಶೈಕ್ಷಣಿಕ ಸಾಲಿನಿಂದ **ಎಂ.ಐ.ಟಿ ಪದವಿ ಕಾಲೇಜು, ಕೆಸರೆ,** ಮೈಸೂರು ಇವರಿಗೆ ಈ ಕೆಳಕಂಡಂತೆ ಸಂಯೋಜನೆ ಮಂಜೂರಾತಿ ಆದೇಶ ನೀಡಲಾಗಿದೆ.

| ಕೋರ್ಸಗಳು | ಭಾಷೆಗಳು | ಐಚ್ಛಿಕಗಳು | ವಿಭಾಗ | ಪ್ರಸ್ತುತ ಇರುವ ವಿದ್ಯಾರ್ಥಿಗಳ ಪ್ರಮಾಣ | ವಿ.ವಿ. ಮತ್ತು ಎಲ್.ಐ.ಸಿ.ಯು ಅನುಮೋದಿಸಿರುವ ಹೆಚ್ಚುವರಿ ಪ್ರವೇಶ ಮಿತಿ |
|---|---|---|---|---|---|
| ಬಿ.ಸಿ.ಎ | ಕನ್ನಡ, ಇಂಗ್ಲೀಷ್, ಹಿಂದಿ | ವಿಶ್ವವಿದ್ಯಾನಿಲಯದ ನಿಯಮಾವಳಿಯಂತೆ | 01 (1+2) | 60 | 120 (60+120=180) |

ಮು.ತಿ.ನೋ.

ವಿಶ್ವವಿದ್ಯಾನಿಲಯದ ಸ್ಥಳೀಯ ತನಿಖಾ ಸಮಿತಿ ಹಾಗೂ ಸರ್ಕಾರದ ಷರತ್ತುಗಳನ್ನು ತಪ್ಪದೇ ಪಾಲಿಸುವುದು ಮತ್ತು ಇದರ ಸಂಬಂಧ ಅನುಪಾಲನಾ ವರದಿಯನ್ನು ಸಮರ್ಪಕ ದಾಖಲಾತಿಗಳೊಡನೆ ಕಾಲೇಜು ಅಭಿವೃದ್ಧಿ ಕಛೇರಿಗೆ ತಲುಪಿಸುವುದು. ಪರೀಕ್ಷಾ ನಿಯಮ/ಪ್ರವೇಶಾತಿ ಮತ್ತು ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಷರತ್ತುಗಳು:

1. ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಕಾಲೇಜಿನ ಮೇಲ್ಕಂಡ ಕೋರ್ಸಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನರಹಿತ ಕೋರ್ಸುಗಳು ಎಂದು ಪರಿಗಣಿಸತಕ್ಕದ್ದು.
2. ಮೇಲ್ಕಂಡ ಕಾಲೇಜು ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು.
3. ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ;
4. ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾನಿಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
5. **ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.**
6. ಮೇಲ್ಕಂಡ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಪರಿನಿಯಮಾವಳಿಗಳ ಪ್ರಕಾರವೇ ಪಡೆಯತಕ್ಕದ್ದು.
7. ಕಾಲೇಜು/ಆಡಳಿತ ಮಂಡಳಿಯು ಶೇ.50ರಷ್ಟು ವಿಶ್ವವಿದ್ಯಾನಿಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾನಿಲಯದ ನಿಯಮಾವಳಿಯ ಪ್ರಕಾರ ನಿಗದಿಪಡಿಸತಕ್ಕದ್ದು ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು. ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಶುಲ್ಕ/ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.
8. ದಿನಾಂಕ 13.8.1997ರಂದು ವಿಶಾಖ ವಿರುದ್ಧ ರಾಜಸ್ಥಾನ ಸರ್ಕಾರ ಮೊಕದ್ದಮೆಯಲ್ಲಿ ಸುಪ್ರೀಂಕೋರ್ಟು ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ ಅದು ಸಂಜ್ಞೇಯ ಅಪರಾಧ (cognizable offence) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಆ ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸತಕ್ಕದ್ದು; ಮುಂದುವರೆದು ಕಾಲೇಜು/ಆಡಳಿತ ಮಂಡಳಿಯು ಸುಪ್ರೀಂ ಕೋರ್ಟ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ, ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು;ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸ್‌ಗಳನ್ನು ನಡೆಸತಕ್ಕದ್ದು; ಕಾಲೇಜಿನ ಪ್ರಾಂಶುಪಾಲರು / ಆಡಳಿತ ಮಂಡಳಿಯು ವಿದ್ಯಾರ್ಥಿ / ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು.
9. ಕಾಲೇಜಿನ ಆಡಳಿತ ಮಂಡಳಿಯು ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲೆಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾನಿಲಯವು ಅನುಮೋದಿಸಿವವರೆಗೆ ಅಥವಾ ಆರು ತಿಂಗಳ ಅವಧಿಗೆ ಮೀರಿ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲಿ;
10. ಕಾಲೇಜಿನ ಆಡಳಿತ ಮಂಡಳಿಯು ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾನಿಲಯ ಅನುಮೋದಿಸುವವರೆಗೆ ಅಥವಾ 6 ತಿಂಗಳ ಅವಧಿಗೆ ಮೀರಿ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ;
11. ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.
12. ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು,

Cont..

13. ಸರ್ಕಾರದ ಆದೇಶ ಸಂಖ್ಯೆ:ಇಡಿ 29 ಯುಎನ್‌ಇ 2021, ದಿನಾಂಕ: 12.02.2021 ರಲ್ಲಿ ತಿಳಿಸಿರುವ ಎಲ್ಲಾ ನಿಯತಾಂಕಗಳನ್ನು ಮತ್ತು ಷರತ್ತುಗಳನ್ನು ಆರು ತಿಂಗಲೊಳಗಾಗಿ ಪೂರೈಸತಕ್ಕದ್ದು.
14. ವಿಶ್ವವಿದ್ಯಾನಿಲಯವು ಆನ್‌ಲೈನ್ ಮೂಲಕ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ LIC ಕಮಿಟಿಯು ನೀಡಿರುವ ವರದಿಯಲ್ಲಿನ ಎಲ್ಲಾ ಮಾನದಂಡಗಳನ್ನು 06 ತಿಂಗಳೊಳಗಾಗಿ ಪೂರೈಸತಕ್ಕದ್ದು.
15. ಯುಜಿಸಿ ವೇತನ ಶ್ರೇಣಿಯ ಪ್ರಾಧ್ಯಾಪಕರನ್ನು 06 ತಿಂಗಳೂಳಗಾಗಿ ಹೊಂದತಕ್ಕದ್ದು.
16. ನ್ಯಾಕ್ ಮಾನ್ಯತೆಯನ್ನು ಪಡೆಯತಕ್ಕದ್ದು.
17. ಈ ಮೇಲ್ಕಂಡ ಎಲ್ಲಾ ಷರತ್ತುಗಳನ್ನು ಸಂಬಂಧಪಟ್ಟ ಕಾಲೇಜು ಪೂರೈಸುವುದನ್ನು ಹಾಗೂ ಕ.ರಾ.ವಿ.ಅಧಿನಿಯಮ, 2000ರ ಪ್ರಕರಣ 59ರಲ್ಲಿನ ಮಾನದಂಡಗಳು ಹಾಗೂ ಸಂಯೋಜನೆಗೆ ಸಂಬಂಧಿಸಿದಂತೆ ಸರ್ಕಾರ ಹೊರಡಿಸಿರುವ ಆದೇಶ ಮತ್ತು ಸುತ್ತೋಲೆಗಳನ್ನು ಸಂಬಂಧಿಸಿದ ಕಾಲೇಜು ಪಾಲಿಸಿವೆಯೇ ಎಂಬುದರ ಕುರಿತಾಗಿ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳಲಿದೆ. ಒಂದು ವೇಳೆ ಎಲ್ಲಾ ಷರತ್ತುಗಳನ್ನು ಪೂರೈಸದಿದ್ದಲ್ಲಿ, ಈ ಆದೇಶವು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

ವಿಶ್ವವಿದ್ಯಾನಿಲಯ ಹಾಗೂ ಸರ್ಕಾರದ ಷರತ್ತುಗಳನ್ನು ತಪ್ಪದೇ ಪಾಲಿಸುವುದು. ಪರೀಕ್ಷಾ ನಿಯಮ/ ಪ್ರವೇಶಾತಿ ಮತ್ತು ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಆದೇಶದ ಮೇರೆಗೆ

ಕುಲಸಚಿವ 26/11/2024

ಕುಲಸಚಿವ

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು

ಗೆ

ಪ್ರಾಂಶುಪಾಲರು

ಎಂ.ಐ.ಟಿ. ಪದವಿ ಕಾಲೇಜು, ಕೆಸರೆ ಕಸಬಾ ಹೋ,

ಮೈಸೂರು ತಾ.& ಜಿಲ್ಲೆ, ಮೈಸೂರು - 570003

ಪ್ರತಿಗಳು:

1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಉಪಕುಲಸಚಿವರು (ಶೈಕ್ಷಣಿಕ/ ಪರೀಕ್ಷಾಂಗ/ ಸಹಾಯಕ ಕುಲಸಚಿವ, ಶೈಕ್ಷಣಿಕ/ ಸಾಮಾನ್ಯ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಕಛೇರಿ ಪ್ರತಿ / ರಕ್ಷಾ ಕಡತ.

ದೂರವಾಣಿ: 2419677/2419361
ಫ್ಯಾಕ್ಸ್: 0821-2419363/2419301

ಇ-ಮೇಲ್: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005

ವಿಷಯ: 2024-25ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ಮುಂದುವರಿಸುವ ಬಗೆಗೆ.

ಉಲ್ಲೇಖ: 1) ಸ್ಥಳೀಯ ವಿಚಾರಣಾ ಸಮಿತಿ ಭೇಟಿ ನೀಡಿದ ದಿನಾಂಕ 05.06.2024
2) ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ದಿನಾಂಕ 11.06.2024
3) ಸಿಂಡಿಕೇಟ್ ಸಭೆಯ ನಿರ್ಣಯದ ದಿನಾಂಕ 12.06.2024

* * * * *

**ಸಂಯೋಜನೆ ಮುಂದುವರಿಕೆ ಮಂಜೂರಾತಿ ಆದೇಶ ಸಂಖ್ಯೆ ಸಿಡಿಸಿ-3/59/2024-25 ದಿನಾಂಕ 10.07.2024**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000, ಪ್ರಕರಣ 59 (17)ರ ಮೇರೆಗೆ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ಸೂಚಿಸಿರುವ ಷರತ್ತುಗಳಿಗೆ ಒಳಪಟ್ಟು ಮತ್ತು ಅವುಗಳನ್ನು ಕಾರ್ಯಗತಗೊಳಿಸುವಂತೆ ಸೂಚಿಸಿ ಕೆಳಕಂಡ ಕಾಲೇಜಿಗೆ ಪಟ್ಟಿಯಲ್ಲಿ ಸೂಚಿಸಿರುವ ಕೋರ್ಸು/ವಿಷಯಗಳಿಗೆ 2024-25ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ ಪ್ರಾಧಿಕಾರಗಳ ಅನುಮೋದನೆಯನ್ವಯ ತಾತ್ಕಾಲಿಕ ಸಂಯೋಜನಾ ಮುಂದುವರಿಕೆ ಮಂಜೂರಾತಿ ಆದೇಶ ನೀಡಲಾಗಿದೆ.

**ಕಾಲೇಜಿನ ಹೆಸರು : ಎಂ.ಐ.ಟಿ. ಪದವಿ ಕಾಲೇಜು, ಕೆಸರೆ ಕಸಬಾ ಹೋ, ಮೈಸೂರು ಜಿಲ್ಲೆ**

**ಮುಂದುವರಿಕೆ ಸಂಯೋಜನೆ:**

| ಶಿಕ್ಷಣ | ಭಾಷೆಗಳು | ಐಚ್ಛಿಕಗಳು | ವಿಷಯ ಸಮೂಹ | ವಿಭಾಗ |
|---|---|---|---|---|
| ಬಿ.ಕಾಂ. | ಕನ್ನಡ, ಇಂಗ್ಲೀಷ್ | ವಿಶ್ವವಿದ್ಯಾನಿಲಯದ ನಿಯಮಾವಳಿ | 01 | 60 |
| ಬಿ.ಸಿ.ಎ. | | ವಿಶ್ವವಿದ್ಯಾನಿಲಯದ ನಿಯಮಾವಳಿ | 01 | 60 |

**2024-25ನೇ ಶೈಕ್ಷಣಿಕ ಸಾಲಿಗೆ ಹೆಚ್ಚುವರಿ ಕೋರಿರುವ B.C.A. -120 ಕೋರ್ಸಿಗೆ ಸ್ಥಳೀಯ ವಿಚಾರಣಾ ಸಮಿತಿಯು ಶಿಫಾರಸ್ಸು ಮಾಡಿದ್ದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ, ಸರ್ಕಾರದಿಂದ ಆದೇಶ ಬಂದ ನಂತರ ವಿಶ್ವವಿದ್ಯಾನಿಲಯದಿಂದ ಸಂಯೋಜನಾ ಆದೇಶವನ್ನು ನೀಡಲಾಗುವುದು ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ.**

ವಿ.ಸೂ. :

1. ಸಂಯೋಜನಾ ಮಂಜೂರಾತಿ ಆದೇಶದಲ್ಲಿ ನೀಡಿರುವ ಕೋರ್ಸು/ವಿಷಯ/ವಿಷಯಸಮೂಹಗಳಿಗೆ ನಿಗದಿಪಡಿಸಿರುವ ಪ್ರವೇಶಾತಿ ಸಂಖ್ಯೆಗೆ ಮಾತ್ರ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದು. ಸಂಯೋಜನಾ ಮಂಜೂರಾತಿ ಆದೇಶ ನೀಡದೇ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ಹೊಸದಾಗಿ ಶಿಫಾರಸ್ಸು ಮಾಡದಿರುವ ಕೋರ್ಸು/ವಿಷಯ/ವಿಷಯ ಸಮೂಹಗಳನ್ನು/ಪ್ರವೇಶಾತಿ ಸಂಖ್ಯೆಯನ್ನು ಪ್ರವೇಶ ಮಾಡಿಕೊಳ್ಳತಕ್ಕದ್ದಲ್ಲ.

2. ಸ್ಥಳೀಯ ವಿಚಾರಣಾ ಸಮಿತಿಯು ನೀಡಿರುವ ವರದಿಯಲ್ಲಿ ಶಿಫಾರಸ್ಸು ಮಾಡಿದ್ದರೂ/ಸರ್ಕಾರದ ಅನುಮೋದನೆ ದೊರೆತಿದ್ದರೂ ವಿಶ್ವವಿದ್ಯಾನಿಲಯದ ಸಂಯೋಜನಾ ಮಂಜೂರಾತಿ ಆದೇಶ ಪಡೆಯದೇ ಯಾವುದೇ ಕೋರ್ಸು/ ವಿಷಯ/ ವಿಷಯಸಮೂಹ/ ಪ್ರವೇಶಾತಿ ಸಂಖ್ಯೆಗೆ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ. ಅಂತಹ ಸಂದರ್ಭದಲ್ಲಿ ಆಗಬಹುದಾದ ತೊಂದರೆಗಳಿಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂಬ ಅಂಶವನ್ನು ಗಮನಿಸತಕ್ಕದ್ದು.

ಪು.ತಿ.ನೋ.

<u>ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಷರತ್ತುಗಳು:</u>

- Govering council University nominee was not mentioned.

ವಿಶ್ವವಿದ್ಯಾನಿಲಯದ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದು. ವಿಶ್ವವಿದ್ಯಾನಿಲಯ ಹಾಗೂ ಸರ್ಕಾರದ ಷರತ್ತುಗಳನ್ನು 2024-25ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಮುನ್ನ ತಪ್ಪದೇ ಪಾಲಿಸುವುದು ಮತ್ತು ಇದರ ಸಂಬಂಧ **ಅಗತ್ಯ ದಾಖಲೆಗಳೊಡನೆ ಸಮರ್ಪಕ ಅನುಪಾಲನಾ ವರದಿಯನ್ನು** ಒಂದು ತಿಂಗಳೊಳಗಾಗಿ ಕಾಲೇಜು ಅಭಿವೃದ್ಧಿ ಮಂಡಳಿ ಕಛೇರಿಗೆ ತಲುಪಿಸುವುದು. ಪರೀಕ್ಷಾ ನಿಯಮ/ ಪ್ರವೇಶಾತಿ ಮತ್ತು ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಕುಲಸಚಿವರು

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಗೆ,

ಪ್ರಾಂಶುಪಾಲರು
ಎಂ.ಐ.ಟಿ. ಪದವಿ ಕಾಲೇಜು,
ಕೆಸರೆ ಕಸಬಾ ಹೋ,
ಮೈಸೂರು ತಾ. & ಜಿಲ್ಲೆ ಮೈಸೂರು-570003

ಪ್ರತಿಗಳು:

1. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್.ಅಂಬೇಡ್ಕರ್ ರಸ್ತೆ, ಬೆಂಗಳೂರು-560 001.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
3. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
4. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಹುಣಸೂರು ರಸ್ತೆ, ಮೈಸೂರು.
5. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಉಪಕುಲಸಚಿವರು (ಶೈಕ್ಷಣಿಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕುಲಪತಿಗಳ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಅಧೀಕ್ಷಕರು, ಸಿಡಿಸಿ/ಕಛೇರಿ ಪ್ರತಿ/ರಕ್ಷಾ ಕಡತಕ್ಕೆ

ದೂರವಾಣಿ: 2419677/2419361 ಇ-ಮೇಲ್: registrar@uni-mysore.ac.in